ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**ಸಿ.ಸಿ.ನಂ.2292/2022**

ದಿನಾಂಕ:**12.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಧನಂಜಯ | ಚಾಸಾ-1, ಪ್ರಾಸಾ-1 |
| ತಂದೆಯ ಹೆಸರು | ಮಲ್ಲಿಕಾರ್ಜುನ | |
| ವಯಸ್ಸು | 48 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ದೇವರಹಳ್ಳಿ ಗ್ರಾಮ | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾಸಾ.2 ನನ್ನ ತಂದೆ. ಚಾಸಾ.3 ಮತ್ತು 4 ನಮ್ಮ ಮನೆ ಕೆಲಸಕ್ಕೆ ಬಂದವರು. ಚಾಸಾ.5 ನನ್ನ ತಾಯಿ. ಚಾಸಾ.6 ಮತ್ತು 7 ನಮ್ಮ ಗ್ರಾಮದವರು. 1 ರಿಂದ 4 ನೇ ಆರೋಪಿಗಳು ನಮ್ಮ ಸಂಬಂಧಿಕರು. ದೇವರಹಳ್ಳಿ ಗ್ರಾಮದ ಸರ್ವೆ ನಂ.45/3 ರಲ್ಲಿ 3 ನೇ ಆರೋಪಿ ಹೆಸರಿಗೆ 4 ಎಕರೆ 20 ಗುಂಟೆ ಜಮೀನು ಇದೆ. ನನ್ನ ತಂದೆ ಚಾಸಾ.2 ರವರಿಗೆ 1 ಎಕರೆ 32 ಗುಂಟೆ ಬಂದಿರುತ್ತದೆ ಎಂದು ಪಹಣಿಯಲ್ಲಿ ನಮೂದು ಇರುತ್ತದೆ. ಆದರೆ ನಮ್ಮ ಸ್ವಾಧೀನದಲ್ಲಿ ಇರುವುದು ಕೇವಲ 20 ಗುಂಟೆ ಆಗಿರುತ್ತದೆ. ಸದರಿ 20 ಗುಂಟೆ ಜಮೀನನ್ನು ಮಂಗೇನಹಳ್ಳಿಯ ರಾಜಪ್ಪ ಅವರಿಗೆ ಗುತ್ತಿಗೆಗೆ ನೀಡಿರುತ್ತೇನೆ. ಸದರಿ ಜಮೀನಿನಲ್ಲಿ ರಾಗಿ ಬೆಳೆ ಬೆಳೆದಿರುತ್ತಾರೆ.

ದಿ:07.12.2021 ರಂದು ಸಂಜೆ 4.30 ಗಂಟೆಗೆ ನಾನು ನನ್ನ ಜಮೀನಿನ ಹತ್ತಿರ ಹೋಗಿದ್ದಾಗ ನನ್ನ ಚಿಕ್ಕಪ್ಪನ ಮಗ 2 ನೇ ಆರೋಪಿಯು ನಮ್ಮ ಜಮೀನಿನಲ್ಲಿ ರಾಗಿಯನ್ನು ಕುಯಿಸುತ್ತಿದ್ದನು. ನಂತರ ನಾನು ರಾಗಿ ಕುಯ್ಯುತ್ತಿದ್ದ ಮಶಿನ್ ಅವರಿಗೆ ನಮ್ಮ ಜಮೀನಿನಲ್ಲಿ ಕುಯ್ಯುವುದು ಬೇಡ ಎಂದು ಹೇಳಿ ಕಳಿಸಿರುತ್ತೇನೆ. ಮಾರನೇ ದಿನ ನನ್ನ ತಂದೆ ಚಾಸಾ.2 ರವರು ಜಮೀನಿನ ಹತ್ತಿರ ಹೋಗಿದ್ದಾಗ ಅಲ್ಲಿ 1,2 ಮತ್ತು 4 ನೇ ಆರೋಪಿಗಳು ನಮ್ಮ ಜಮೀನಿನಲ್ಲಿ ಮತ್ತೆ ರಾಗಿ ಕುಯ್ಯುಸುತ್ತಿದ್ದಾರೆ ಎಂದು ನನ್ನ ತಂದೆಯವರು ಬೆಗಳ್ಳೆ ಸುಮಾರು 9.30 ಗಂಟೆಗೆ ಫೋನ್ ಮಾಡಿ ತಿಳಿಸಿರುತ್ತಾರೆ. ನಂತರ

ನಾನು ನಮ್ಮ ಮನೆ ಕೆಲಸಕ್ಕೆ ಬಂದಿದ್ದ ಚಾಸಾ.3 ಮತ್ತು 4 ರನ್ನು ಕರೆದುಕೊಂಡು ಹೊಲದ ಹತ್ತಿರ ಹೋಗಿರುತ್ತೇನೆ. ನಾನು ನಮ್ಮ ಜಮೀನಿನಲ್ಲಿ ರಾಗಿ ಕುಯ್ಯುವುದು ಬೇಡ ಎಂದು ತಡೆಯಲು ಹೋದಾಗ 2 ನೇ ಆರೋಪಿಯು ಬಿದಿರು ಕೋಲಿನಿಂದ ನನ್ನ ಎಡ ಭುಜಕ್ಕೆ ಹೊಡೆದಿರುತ್ತಾನೆ. 1 ನೇ ಆರೋಪಿ ಕಬ್ಬಿಣದ ರಾಡಿನಿಂದ ನನ್ನ ಬಲ ಗುಂಡಿಗೆ, ಬಲ ಕಾಲಿಗೆ ಹೊಡೆದಿರುತ್ತಾನೆ. ನಂತರ 3 ನೇ ಆರೋಪಿ ನನ್ನನ್ನು ಹಿಡಿದು ನಿಲ್ಲಿಸಿಕೊಂಡಿರುತ್ತಾರೆ. 2 ನೇ ಆರೋಪಿ ಕಲ್ಲಿನಿಂದ ನನ್ನ ಬಲಕಣ್ಣಿನ ಕೆಳ ಭಾಗಕ್ಕೆ ಹೊಡೆದು ಹಲ್ಲೆ ಮಾಡಿರುತ್ತಾರೆ. ನಂತರ ಎಲ್ಲಾ ಆರೋಪಿಗಳು ನನ್ನನ್ನು ಕೆಳಗೆ ಬೀಳಿಸಿಕೊಂಡು ಚಪ್ಪಲಿ ಕಾಲಿನಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ. 4 ನೇ ಆರೋಪಿಯು ಇವರನ್ನು ಹೊಡೆಯಿರಿ ಎಂದು ಹೇಳುತ್ತಿದ್ದರು. 4 ನೇ ಆರೋಪಿ ನನಗೆ ಮತ್ತು ಚಾಸಾ.2 ರವರಿಗೆ ಸೂಳೆಮಕ್ಕಳಿಗೆ ಹೊಡೆಯಿರಿ ಸಾಯಿಸಿ ಎಂದು ಹೇಳಿರುತ್ತಾರೆ.

ನಂತರ ನನ್ನ ತಂದೆಯವರು ಗಲಾಟೆ ಬಿಡಿಸಲು ಬಂದಾಗ 1 ಮತ್ತು 2 ನೇ ಆರೋಪಿ ನನ್ನ ತಂದೆಯವರ ಎದೆಗೆ ಕೈಹಾಕಿ ದೂಡಿದ್ದು ಅವರು ಕೆಳಗೆ ಬಿದ್ದು ಗಾಯ ಆಗಿರುತ್ತದೆ. ನಂತರ ಚಾಸಾ.3 ಮತ್ತು 4 ರವರು ಜಗಳವನ್ನು ಬಿಡಿಸಿರುತ್ತಾರೆ. ನಂತರ ಅವರೇ ನನ್ನ ತಾಯಿ ಚಾಸಾ.5 ರವರಿಗೆ ಫೋನ್ ಮಾಡಿ ಗಲಾಟೆ ವಿಚಾರ ತಿಳಿಸಿರುತ್ತಾರೆ. ನಂತರ 108 ಆ್ಯಂಬುಲೆನ್ಸ್ ಗೆ ಫೋನ್ ಮಾಡಿ ನಮ್ಮನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿ ಗಲಾಟೆಯದಾಗ ಬೆಳಗ್ಗೆ ಸುಮಾರು 10.00 ಗಂಟೆಯಾಗಿರುತ್ತದೆ. ನಂತರ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ ಎಡ ಭುಜದ ಮೂಳೆ ಮುರಿದಿದೆ ಎಂದು ಚಿಕ್ಕಮಗಳೂರಿನ ಆಸ್ಪತ್ರೆಗೆ ಹೋಗಲು ತಿಳಿಸಿರುತ್ತಾರೆ. ನಂತರ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ 1 ವಾರ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ.

ನಾನು ಕಡೂರಿನಲ್ಲಿ ಚಿಕಿತ್ಸೆ ಪಡೆಯುವಾಗ ಪೋಲೀಸರಿಗೆ ಹೇಳಿಕೆ ದೂರು ನೀಡಿರುತ್ತೇನೆ. ಸದರಿ ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಸಾಕ್ಷಿ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆ ಮತ್ತು ಕಬ್ಬಿಣದ ರಾಡು ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಿದುರಿನ ಕೋಲನ್ನು ಮತ್ತು ಕಬ್ಬಿಣದ ರಾಡು ಮತ್ತು ಕಲ್ಲನ್ನು ನೋಡಿ

ಗುರುತಿಸಿದ್ದು,ಅವುಗಳನ್ನು ಕ್ರಮವಾಗಿ ಮು.ಮಾ.1 ರಿಂದ 3 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.